# ಕಾವ್ಯಕ್ಕೆ ಕಂಪು ಕೊಡುವ ಗಮಕ

ಕರ್ನಾಟಕದ ವಿಶೇಷ ಕಲಾ ಪ್ರಕಾರ ಗಮಕ. ಎಲ್ಲರ ಮನಸ್ಸಿಗೂ ತಾಗುವಂತೆ ಕಾವ್ಯವಾಚನ ಮಾಡುವುದೇ ಗಮಕ. ಗಮಕವನ್ನು ಹಾಡುತ್ತಾ ಕಲೆಯಲ್ಲಿ ಬಹಳಷ್ಟು ಸಾಧನೆ ಮಾಡಿ ಅನೇಕ ಶಿಷ್ಯ ಬಳಗವನ್ನು ಸಮಾಜಕ್ಕೆ ಕೊಟ್ಟ ಗಮಕ ಕಲಾ ಪರಿಷತ್ತಿನ ಸಮ್ಮೇಳನಾಧ್ಯಕ್ಷೆ ಗಂಗಮ್ಮ ಕೇಶವಮೂರ್ತಿಯವರ ಸಂದರ್ಶನ ಚಂದನದ 'ಶುಭೋದಯ ಕರ್ನಾಟಕ'ದಲ್ಲಿ ಮೂಡಿ ಬಂತು.

ಅವರು ಹಾಡಿದ ನವರಸ ರಾಗದ ಪದ್ಯಗಳನ್ನು ಕೇಳಿದುದು ಮನಸ್ಸಿಗೆ ಆನಂದ ನೀಡಿತು. 'ಇಂಪಿದೆ, ಪೆಂಪಿದೆ ಕನ್ನಡ ಕಾವ್ಯಕ್ಕೆ ಕಂಪನು ಕೊಡುವನು ಗಮಕಿ, ಕನ್ನಡದ ಕಂದಗಳಿರಾ ಕೇಳಿಸಲಿ ನಿಮಗೆಲ್ಲ ಷಟ್ಪದಿಯ ಝೇಂಕಾರ' ಎಂದು ಹಾಡಿ ಶಾಲೆಯ ಪಠ್ಯದಲ್ಲಿ ಇರುವ ಪದ್ಯಗಳನ್ನೇ ಗಮಕದಂತೆ ಹಾಡಲು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು. ಇಂತಹ ಕಲೆಗಳ ಪರಿಚಯ ಮಾಡಿಕೊಡುವ ಪ್ರಯತ್ನ ಹೆಚ್ಚು ಮಾಡಬೇಕು.

—ವೀಣಾ ಶಂಕರ್, ಬೆಂಗಳೂರು

# ಏನು ಪ್ರಯೋಜನ?

ಕಲರ್ಸ್ ಕನ್ನಡದ 'ಬಿಗ್‌ಬಾಸ್' ಎಂಬ ಆಡಂಬರದ ಸೆಕೆಂಡ್ ಇನಿಂಗ್ಸ್ ಆರಂಭವಾಗಿದೆ. ಅದರಿಂದ ಸ್ಪರ್ಧಿಗಳಿಗೆ ಬಿಟ್ಟರೆ, ಬೇರೆಯವರಿಗೆ ಮೂರು ಕಾಸಿನ ಪ್ರಯೋಜನವಿಲ್ಲ. ಅವರ ವಿಕೃತ ಆಟ, ಟಾಸ್ಕ್ ಹೆಸರಿನಲ್ಲಿ ನಡೆಯುವ ಗಲಭೆ, ಜಗಳ ಯಾರಿಗೆ ಪ್ರೀತಿಯೋ ನಾನರಿಯೆ. ಅಲ್ಲಿ ಒಳಗಿರುವ ಇಬ್ಬರು ಹಿರಿಯ ಸ್ಪರ್ಧಿಗಳು ಸಾಮಾಜಿಕ ಕಾಳಜಿಯುಳ್ಳ ಕಾರ್ಯಕರ್ತರಂತೆ. ಸಮಾಜದ ಮೇಲೆ ಎಳ್ಳಷ್ಟು ಕಾಳಜಿ ಇದ್ದಿದ್ದರೆ ಅವರು ಈ ಆಟಕ್ಕೆ ಖಂಡಿತವಾಗಿ ಬರಬಾರದಿತ್ತು. ಮಾತ್ರವಲ್ಲ ಇಂತಹ ಕಾರ್ಯಕ್ರಮ ನಿಲ್ಲಿಸಲು ಒತ್ತಾಯಿಸಿ ಆಂದೋಲನ ಮಾಡಬಹುದಿತ್ತು.

—ವಿ. ವಿಜಯೇಂದ್ರ ರಾವ್, ಬೆಂಗಳೂರು

# ಮುಂದೆ ಇನ್ನು ಯಾವ ಆಟವೋ

'ಬಿಗ್ ಬಾಸ್' ಮೊದಲ ಇನಿಂಗ್ಸ್‌ನಲ್ಲಿ ಜೋಡಿ ಆಟಗಳನ್ನು ನೋಡಿ ಉಸ್ಸಪ್ಪ ಎಂದು ಉಸಿರು ಬಿಡುವಷ್ಟರಲ್ಲಿ ಇನ್ನೂ ಅಮೋಘ ಪ್ರದರ್ಶನ ಬಾಕಿ ಇದೆ ಅಂತ ಪ್ರತ್ಯಕ್ಷರಾಗಿದ್ದಾರೆ. ಹಿಂದೆ ಸ್ನೇಹದ ಹೆಸರಿನಲ್ಲಿ ಎರಡು ಜೋಡಿಗಳ ಮಿತಿ ಮೀರಿದ ವರ್ತನೆ ಮುಜುಗರ ತರುತ್ತಿತ್ತು. ತಾವು ಆಪ್ತರೆಂದು ಹೇಳುತ್ತಾ ಸ್ನೇಹದ ಅತಿರೇಕ ಮೀರಿದ ವರ್ತನೆ ಅಸಹನೀಯ ಅನಿಸಿತ್ತು. ಆ ಇಬ್ಬರು ಹೆಣ್ಮಕ್ಕಳ ಮನೆಯ ಕಡೆಯಿಂದ ಪತ್ರದ ಮೂಲಕ ಈ ವಿಶೇಷ ಆಟಕ್ಕೆ ಮೆಚ್ಚುಗೆ ಕೂಡ ಸಿಕ್ಕಿತ್ತು. ಎರಡನೇ ಇನಿಂಗ್ಸ್ ಶುರು ಆಗಿದೆ. ಮುಂದೆ ಇನ್ಯಾವ ಆಟಗಳನ್ನು ನೋಡಬೇಕಾಗುತ್ತದೆಯೋ?

—ವೀಣಾ ಮಂಜಪ್ಪ, ಬೆಂಗಳೂರು

ವಾರದ ಪತ್ರ

# ಗೀತೆಗಳ ವಿವರ ಇರಲಿ

ಜೂಮ್, ಮಸ್ತಿ, ಐಲವ್, ಬಿ4ಯು, ಮ್ಯೂಸಿಕ್ ಇಂಡಿಯಾ ಮೊದಲಾದ ಹಿಂದಿ ಸಿನಿಮಾಗಳ ಗೀತೆಗಳಿಗೇ ಮೀಸಲಾದ ಮ್ಯೂಸಿಕ್ ವಾಹಿನಿಗಳು ಪ್ರತಿ ಚಿತ್ರಗೀತೆಯ ಆರಂಭ ಹಾಗೂ ಕೊನೆಯಲ್ಲಿ ಆ ಗೀತೆಗೆ ಸಂಬಂಧಿಸಿದಂತೆ ಚಿತ್ರದ ಹೆಸರು, ಗಾಯಕರು, ರಚನೆ, ಸಂಗೀತಕಾರರ ಹೆಸರುಗಳನ್ನು ತೋರಿಸುತ್ತಾರೆ. ಇದರಿಂದ ಆಯಾ ಗೀತೆಯ ಸಂಪೂರ್ಣ ವಿವರ ವೀಕ್ಷಕರಿಗೆ ದಕ್ಕುತ್ತದೆ.

ಆದರೆ, ಕನ್ನಡದ ಉದಯ ಮ್ಯೂಸಿಕ್, ಪಬ್ಲಿಕ್ ಮ್ಯೂಸಿಕ್, ರಾಜ್ ಮ್ಯೂಸಿಕ್ ಮೊದಲಾದ ಹಲವು ಸಂಗೀತ ವಾಹಿನಿಗಳು ಗೀತೆಗೆ ಸಂಬಂಧಿಸಿದ ವಿವರ ಪ್ರಕಟಿಸದೇ ಗೀತೆಗಳನ್ನು ಪ್ರಸಾರ ಮಾಡುತ್ತಾರೆ. ಇದರಿಂದ ವೀಕ್ಷಕರಿಗೆ ಆ ಗೀತೆಯ ಕಾರಣಕರ್ತರಾದವರ ಪರಿಚಯವೇ ಆಗುವುದಿಲ್ಲ. ಹಾಗಾಗಿ ಇಂದಿಗೂ ಬಹಳಷ್ಟು ಗಾಯಕರು, ಗೀತೆ ರಚನೆಕಾರರು, ಸಂಗೀತ ನಿರ್ದೇಶಕರು ವೀಕ್ಷಕರಿಗೆ ಅಪರಿಚಿತರಾಗಿ ಎಲೆ ಮರೆಯ ಕಾಯಿಯಂತಾಗಿದ್ದಾರೆ. ನಮ್ಮ ಅಭಿಲಾಷೆಯಂತೆ ಕನ್ನಡ ವಾಹಿನಿಗಳು ಗೀತೆಗಳ ವಿವರ ಪ್ರಸಾರ ಮಾಡಲಿ.

—ಕೆ. ಶ್ರೀನಿವಾಸರಾವ್ ಹರಪನಹಳ್ಳಿ

# ಶಿಕ್ಷೆ ಕೊಟ್ಟಿದ್ದು ಸರಿ

ಕನ್ನಡ ಕಲರ್ಸ್‌ನ 'ಬಿಗ್ ಬಾಸ್'ನಲ್ಲಿ ಭಾನುವಾರ ಸುದೀಪ್ ಅವರು ಪ್ರಶಾಂತ್‌ಗೆ ಕೊಟ್ಟ ಶಿಕ್ಷೆ ನಿಜಕ್ಕೂ ಸರಿ ಅನಿಸಿತು. ಆ ಸ್ಪರ್ಧಿಯ ಹಾವ–ಭಾವ ಮುಖದಲ್ಲಿನ ಸಂಕಟ ಪ್ರಕಟವಾಯಿತು. ಇನ್ನೊಬ್ಬ ಸ್ಪರ್ಧಿ ಚಕ್ರವರ್ತಿ ಅವರ ಜೊತೆ ಸೇರಿ ತಮ್ಮಿಬ್ಬರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಅನ್ನುವಂತೆ ವರ್ತಿಸುತ್ತಿದ್ದಾರೆ. ಅವರಿಬ್ಬರು ಮತ್ತೊಬ್ಬರ ನಡುವೆ ಜಗಳ ತಂದಿಟ್ಟು ತಮಾಷೆ ನೋಡುತ್ತಿದ್ದರು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

# ಹಳೇ ಧಾರಾವಾಹಿ ವಾಸಿ

ಕೆಲವು ಧಾರಾವಾಹಿಗಳಿಗೆ ಅಂತ್ಯ ಇಲ್ಲವೇ? 'ಪುಟ್ಟಗೌರಿ ಮದುವೆ'ಯ ಮುಂದುವರಿದ ಭಾಗ 'ಮಂಗಳಗೌರಿ ಮದುವೆ'ಗೆ ಕೊನೆ ಯಾವಾಗ? ಮುಗೀತು ಅನ್ನುವಷ್ಟರಲ್ಲಿ ಏನೋ ತಿರುವು ತಂದು ಎಳೆದು ತೋರಿಸುತ್ತಿದ್ದಾರೆ.

ಹಳೆಯ ಧಾರಾವಾಹಿಗಳಾದ 'ಗುಡ್ಡದ ಭೂತ', 'ಮಾಯಾಮೃಗ', 'ಮಂಥನ', 'ದಂಡಪಿಂಡಗಳು' ಮೊದಲಾದ ಕಥೆಗಳನ್ನು ಪ್ರಸಾರ ಮಾಡಲಿ.

—ಕಮಲಾದೇವಿ ರಾಜಶೇಖರ್ ಹಳ್ಳೂರ್, ಬೆಂಗಳೂರು

# ರಹಸ್ಯ ಬಯಲಾಗಲಿ

ಝೀ ಕನ್ನಡದ 'ಬ್ರಹ್ಮಗಂಟು' ಧಾರಾವಾಹಿ ವಿಚಿತ್ರವಾಗುತ್ತಾ ಹೋಗುತ್ತಿದೆ. ಈ ಧಾರಾವಾಹಿಯಲ್ಲಿ ಮೊದಲನೆಯದಾಗಿ ಲಕ್ಕಿಯ ತಂದೆ (ನಾಗಾಭರಣ) ಕಾಣೆಯಾದರು. ನಂತರ ಪ್ರಣತಿಯ ಅಮ್ಮ (ವನಿತಾವಾಸು) ಕಾಣೆಯಾದರು. ಲಕ್ಕಿಯ ಸಣ್ಣತಂಗಿ ಯುಗಾದಿ ಹಬ್ಬದ ದಿನವೂ ಊಟ ಮಾಡುವಾಗಲೂ ಕಾಣಿಸಲಿಲ್ಲ. ಈಗ ಪ್ರಣತಿಯ ಗಂಡ ಸುಬ್ಬು ನಾಪತ್ತೆಯಾಗಿದ್ದಾರೆ ಹಾಗೂ ಪ್ರಣತಿಯ ಭಾವನ ಮಗ ಕೂಡ ಕಾಣೆಯಾಗಿದ್ದಾನೆ. ಈಗಂತೂ ಲಕ್ಕಿ ಹಾಗೂ ಸಿನಿಮಾ ನಟಿ ಕಾಣಿಸುತ್ತಲೇ ಇಲ್ಲ ಹಾಗೂ ಗೀತಾಳ ಅಣ್ಣನ ರಹಸ್ಯವೇನು ಎಂದು ಕಳೆದ ಒಂದು ವಾರದಿಂದ ಹೇಳುತ್ತಾ ಇಲ್ಲ. ಗೀತಾಳ ಅಣ್ಣ ಅತ್ತಿಗೆಯ ಮಧ್ಯೆ ಯಾಕೆ ಕೋಪ ಎಂದು ಇದುವರೆಗೂ ತಿಳಿಸಿಲ್ಲ.

—ಪಿ. ಲತಾ, ದೆಹಲಿ

# ಎಡವಟ್ಟು ಸುದ್ದಿಗಳು

ನಮ್ಮ ಸುದ್ದಿ ವಾಹಿನಿಗಳು ಕರ್ಣ ಕಠೋರ ಪದ ಪುಂಜಗಳನ್ನು ದಿನ ಪೂರ್ತಿ ನೀಡುತ್ತಲೇ ವೀಕ್ಷಕರಲ್ಲಿ ಕಸಿವಿಸಿಯನ್ನು ಉಂಟು ಮಾಡುತ್ತಿದ್ದಾರೆ.

ಮುಖ್ಯ ಸುದ್ದಿ ಮತ್ತು ಅದರ ಕೆಳಗೆ ನಿರಂತರ ಪ್ರಸಾರ ಆಗುತ್ತಿರುವ ಅಡಿಬರಹ ಎರಡನ್ನೂ ಒಟ್ಟಿಗೆ ನೋಡಿದರೆ ಆಭಾಸ ಉಂಟಾಗುತ್ತದೆ. ಕಳೆದ ವಾರ ಪ್ರತಿಷ್ಠಿತ ಸುದ್ದಿವಾಹಿನಿಯೊಂದರಲ್ಲಿ ಪ್ರಸಾರವಾದ ಚಿತ್ರ ನೋಡಿ! ಅಡಿ ಬರಹದಲ್ಲಿ ಹೆಚ್ಚು ವಿರೋಧಾಭಾಸವನ್ನು ಉಂಟುಮಾಡುವ ಎಡವಟ್ಟು ಗೋಚರಿಸಿತು. ಅಂತಹ ತಪ್ಪು ತಪ್ಪಿಸುವಂತೆ ಆಗಲಿ.

—ಆರ್. ವೀರೇಶ್ ಕುಮಾರ್, ಬೆಂಗಳೂರು

# ನ್ಯೂನತೆ ಪರಿಹರಿಸಿ

ಚಂದನದ 'ಥಟ್ ಅಂತ ಹೇಳಿ'ಯ ಹಳೆಯ ಕಂತುಗಳು ಪ್ರಸಾರವಾಗುತ್ತಿವೆ. ಬಹುಶಃ ಮುಂದಿನ ದಿನಗಳು ಹೊಸ ಕಂತುಗಳು ಸಾಧ್ಯವಾಗಬಹುದು.

ಇತ್ತೀಚಿನ ಕಾರ್ಯಕ್ರಮಗಳನ್ನು ವೀಕ್ಷಿಸುವಾಗ ಸ್ಪರ್ಧಿಗಳು ಫಲಕದ ಮೇಲೆ ಮೂಡುವ ಪ್ರಶ್ನೆಗಳನ್ನು ಓದಲು ಕಷ್ಟ ಪಡುತ್ತಾರೆ. ಆ ಅಕ್ಷರಗಳು ಬಹಳ ಚಿಕ್ಕದಾಗಿರಬಹುದು ಅಥವಾ ಅಸ್ಪಷ್ಟವಾಗಿರಬಹುದು. ಈ ಗೊಂದಲದಲ್ಲಿ ತಪ್ಪಾದ ಉತ್ತರಗಳು ಮೂಡುವ ಸಾಧ್ಯತೆ ಜಾಸ್ತಿ. ಆದ್ದರಿಂದ ಮುಂದೆ ಈ ನ್ಯೂನತೆಯನ್ನು ಸರಿ ಪಡಿಸಿಕೊಳ್ಳಬಹುದಾಗಿದೆ.

—ರಾಮಚಂದ್ರ, ಮರಳ್ಳಿ